ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ
**Karnataka State Rural Development and Panchayat Raj University**

ರೈತ ಭವನ, ಜನರಲ್‌ಕಾರ್ಯಪ್ಪ ವೃತ್ತ, ಗದಗ– 582 101
RaithaBhavana, General Cariappa Circle, Gadag – 582 101
E-mail: ksrdpruadmissions@gmail.com Phone: 08372-230338, Fax: 08372-297343

## News about Fodder to Cattle (Day 2) Published in Various Kannada Daily News Papers Date :03/05/2021



ಜಾನುವಾರುಗಳಿಗೆ ಮೇವಿನ ವ್ಯವಸ್ಥೆ | ವಿವಿ ಕಾರ್ಯಕ್ಕೆ ಜನರ ಮೆಚ್ಚುಗೆ

# ಹಸಿವು ನೀಗಿಸಿದ ವಿವಿ ಸಿಬ್ಬಂದಿ

■ **ವಿಕ ವಿಶೇಷ** ಗದಗ

ಕೊರೊನಾ ಸಂಕಷ್ಟ ಕಾಲದಲ್ಲಿ ಅಸಂಖ್ಯಾತ ಮಾನವೀಯ ಮುಖಗಳು ಅನಾವರಣ ಕಂಡಿವೆ. ಅದರಲ್ಲೂ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿವಿ ಸಿಬ್ಬಂದಿ, ವಿದ್ಯಾರ್ಥಿಗಳ ಕಾರ್ಯ ವಿಶಿಷ್ಟವಾಗಿದೆ.

**ವಿಶ್ವವಿದ್ಯಾಲಯದಲ್ಲಿ ಮೇವು ಬ್ಯಾಂಕ್**

**ಗೋ ರಕ್ಷಣೆ ಕಾರ್ಯಕ್ಕೆ ಸಾರ್ವಜನಿಕರ ಹರ್ಷ**

ಜನತಾ ಕರ್ಫ್ಯೂ ಸಮಯದಲ್ಲಿ ಹಸಿವಿನಿಂದ ಬಳಲುತ್ತಿರುವ ಅವಳಿ ನಗರದ ಬೀದಿ ಜಾನುವಾರುಗಳಿಗೆ ವಿವಿ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಮೇವು ನೀಡುವ ಮೂಲಕ, ಜಾನುವಾರುಗಳ ಹಸಿವು ನೀಗಿಸುವ ಕೆಲಸ ಆರಂಭಿಸಿದ್ದಾರೆ.

ಎರಡು ದಿನಗಳಿಂದ ಅವಳಿ ನಗರದ ವಿವಿಧ ವಾರ್ಡ್‌ಗಳಿಗೆ ತೆರಳಿ ಹಸಿ ಮೇವು ಪೂರೈಸುವ ಮೂಲಕ ಗೋ ಸಂರಕ್ಷಣೆ ಕಾರ್ಯದಲ್ಲಿ ನಿರತರಾಗಿದ್ದಾರೆ. ವಿವಿ ಸಿಬ್ಬಂದಿ ಕಾರ್ಯಕ್ಕೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ.

ಗದಗನಲ್ಲಿ ಬಿಡಾಡಿ ಜಾನುವಾರುಗಳಿಗೆ ಕೆಎಸ್‌ಆರ್‌ಡಿಪಿಆರ್ ವಿವಿ ಸಿಬ್ಬಂದಿ ಮೇವು ಹಾಕುತ್ತಿರುವುದು.

**ಮೇವು ಬ್ಯಾಂಕ್** : ಅವಳಿ ನಗರದಲ್ಲಿ ಬಿಡಾಡಿ ದನಗಳ ಹೆಚ್ಚಿನ ಸಂಖ್ಯೆಯಲ್ಲಿವೆ. ತರಕಾರಿ ಮಾರುಕಟ್ಟೆ ಸ್ಥಳಾಂತರ ಮಾಡಿದ್ದರಿಂದ ಆ ಎಲ್ಲ ಬಿಡಾಡಿ ದನಗಳಿಗೆ ಆಹಾರ ಇಲ್ಲದೇ ಸಂಕಷ್ಟ ಎದುರಿಸುವಂತಾಗಿದ್ದವು. ಹೀಗಾಗಿ ಕೆಲ ಜಾನುವಾರುಗಳಿಗೆ ನೆರವಾಗುವ ಉದ್ದೇಶದಿಂದ ಮೇವು ವಿತರಣೆ ಆರಂಭಿಸಲಾಗಿದೆ. ಮೇವು ವಿತರಣೆಗೆ ಹೋದಾಗ ಕೆಲ ಜಾನುವಾರುಗಳು ಪ್ಲಾಸ್ಟಿಕ್ ತಿನ್ನುವುದನ್ನು ನೋಡಿ ಮನಸ್ಸಿಗೆ ನೋವಾಯಿತು. ಹೀಗಾಗಿ ಮೇವು ವಿತರಣೆಯನ್ನು ಕನಿಷ್ಠ 10-12 ದಿನವಾದರೂ ಕೈಗೊಳ್ಳಬೇಕು ಎನ್ನುವ ಕಾರಣಕ್ಕೆ ವಿವಿದಲ್ಲಿ ಮೇವು ಬ್ಯಾಂಕ್ ಆರಂಭಿಸಲಾಗಿದೆ. ವಿವಿ ಆವರಣದಲ್ಲಿ ಬೆಳೆದ ಮೇವು, ದಾನಿಗಳಿಂದ ಸಂಗ್ರಹಿಸಿ ಅಥವಾ ಮೇವು ಖರೀದಿ ಮಾಡಿ ಜಾನುವಾರುಗಳಿಗೆ ನೀಡುವ ಇಚ್ಛೆ ಹೊಂದಿದ್ದಾಗಿ ವಿವಿ ಸಿಬ್ಬಂದಿ ಹೇಳುತ್ತಾರೆ.

**2-3 ಟನ್ ಮೇವು ಪೂರೈಕೆ**

ಕೊರೊನಾ ಸಂಕಷ್ಟದ ಮಧ್ಯೆಯೂ ಎರಡು ದಿನಗಳಿಂದ 2-3 ಟನ್ ಹಸಿ ಮೇವು ವಿತರಣೆ ಮಾಡಲಾಗಿದೆ. ಖುದ್ದಾಗಿ ಜಾನುವಾರುಗಳಿದ್ದಲ್ಲಿಗೆ ತೆರಳಿ ಮೇವು ಹಾಕಲಾಗುತ್ತಿದೆ. ದಾನಿಗಳ ನೆರವು ಪಡೆದು ಈ ಕಾರ್ಯವನ್ನು ಮತ್ತಷ್ಟು ದಿನ ತಪ್ಪದೇ ಮುನ್ನಡೆಸಿಕೊಂಡು ಹೋಗುವ ಇಚ್ಛೆ ಇದೆ ಎನ್ನುತ್ತಾರೆ ವಿವಿ ವಿಶೇಷಾಧಿಕಾರಿ ಉಮೇಶ ಬಾರಕೇರ.

**ಗ್ರಾವಿವಿ ಸ್ಪಂದನೆ**

ಕೊರೊನಾ ಸಂಕಷ್ಟ ನಿವಾರಿಸುವ ನಿಟ್ಟಿನಲ್ಲಿ ಕೆಎಸ್‌ಆರ್‌ಡಿಪಿಆರ್ ವಿವಿ ಆಪ್ತ ಸಮಾಲೋಚನೆಗಾಗಿ ಸಹಾಯವಾಣಿ, ಅಗತ್ಯವಿದ್ದವರಿಗೆ ಆಹಾರ ವಿತರಣೆ, ರಕ್ತದಾನ, ಪ್ಲಾಸ್ಮಾ ದಾನ ಜಾಗೃತಿ, ಲಸಿಕೆ ಹಾಕಿಸಿಕೊಳ್ಳುವಂತೆ ತಿಳುವಳಿಕೆ ನೀಡುವ ಕೆಲಸ ಮಾಡುತ್ತಿದೆ. ಮೇ 5 ರಿಂದ ಯೋಗ ಶಿಬಿರ ಹಮ್ಮಿಕೊಂಡಿದೆ.

ಕೊರೊನಾ ಸಂಕಷ್ಟದ ಸಮಯದಲ್ಲಿ ಜನರ ಜತೆಗೆ ಜಾನುವಾರುಗಳು ಸಂಕಷ್ಟ ಎದುರಿಸುತ್ತಿವೆ. ವಿವಿ ಕುಲಪತಿಗಳು, ಕುಲಸಚಿವರ ಮಾರ್ಗದರ್ಶನದಲ್ಲಿ ಮೇವು ವಿತರಣೆ ಮಾಡಲಾಗುತ್ತಿದೆ.

**- ಲಿಂಗರಾಜ ನಿಡುವಣಿ,**
ಸಂಶೋಧನಾ ಸಂಯೋಜಕ



ಗದಗ ನಗರದಲ್ಲಿ ಗ್ರಾಮೀಣಾಭಿವೃದ್ಧಿ ವಿಶ್ವವಿದ್ಯಾಲಯದ ಸಿಬ್ಬಂದಿ ಬೀದಿ ಬದಿ ಜಾನುವಾರುಗಳಿಗೆ ಭಾನುವಾರ ಮೇವು ವಿತರಿಸಿದರು.

# ಗ್ರಾಮೀಣಾಭಿವೃದ್ಧಿ ವಿವಿಯಿಂದ ಜಾನುವಾರುಗಳಿಗೆ ಮೇವು



ಗದಗನ ಗ್ರಾಮೀಣಾಭಿವೃದ್ಧಿ ವಿವಿಯಿಂದ ಜಾನುವಾರುಗಳಿಗೆ ಮೇವು ನೀಡಲಾಯಿತು.

**ಗದಗ:** ಕರೋನಾ ಎರಡನೇ ಅಲೆಯ ತೀವ್ರತೆ ಅರಿತು ಸರಕಾರ ಕೋವಿಡ್ ಕರ್ಫ್ಯೂ ಘೋಷಿಸಿದ್ದು, ಈ ಅವಧಿಯಲ್ಲಿ ಮನುಷ್ಯರ ಜತೆಗೆ ಪ್ರಾಣಿ ಪಕ್ಷಿಗಳಿಗೂ ಸಂಕಷ್ಟ ಎದುರಾಗಿದೆ. ಈ ಕಾರಣದಿಂದ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ವಿಶ್ವವಿದ್ಯಾಲಯವು ಜಾನುವಾರುಗಳಿಗೆ ಮೇವು ವಿತರಣೆ ಮಾಡುವ ಕಾರ್ಯಕ್ಕೆ ಮುಂದಾ ಗಿದೆ.

ಗದಗ- ಬೆಟಗೇರಿ ನಗರದಲ್ಲಿನ ಜಾನುವಾರುಗಳಿಗೆ ಮೇವು ವಿತರಣೆ ಮಾಡಲಾಯಿತು. ಆಸಕ್ತರು ಈ ಕಾರ್ಯಕ್ಕೆ ಕೈ ಜೋಡಿಸಬಹುದು ಎಂದು ವಿವಿ ಸಿಬ್ಬಂದಿ ಮನವಿ ಮಾಡಿದರು. ಕೋವಿಡ್ ಕರ್ಫ್ಯೂ ಸಂದರ್ಭದಲ್ಲಿ ಹಸಿದ ಜಾನುವಾರುಗಳಿಗೆ ಮೇವು ವಿತರಣೆ ಮಾಡುವುದಷ್ಟೇ ಅಲ್ಲದೆ ವಿಶ್ವವಿದ್ಯಾಲಯದ ವತಿಯಿಂದ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ರಕ್ತದಾನ, ಪ್ಲಾಸ್ಮಾ ದಾನ, ಲಸಿಕೆ ಪಡೆದುಕೊಳ್ಳುವಂತೆ ಸಾರ್ವಜನಿ ಕರಲ್ಲಿ ಜನಜಾಗೃತಿ ಮೂಡಿಸಲಾಗುತ್ತಿದೆ. ಶಿಕ್ಷಕರು, ಶಿಕ್ಷಕೇತರ ಸಿಬ್ಬಂದಿ ಜತೆಗೆ ಸಾರ್ವಜ ನಿಕರ ಸಹಕಾರ ಪಡೆದು ಇಂತಹ ಕಾರ್ಯಕ್ಕೆ ಮುಂದಾಗಿರುವುದು ವಿಶ್ವವಿದ್ಯಾಲಯದ ವಿಶೇಷವಾಗಿದೆ ಎಂದು ಕುಲಪತಿ ಪ್ರೊ.ವಿಷ್ಣುಕಾಂತ ಎಸ್. ಚಟಪಲ್ಲಿ ತಿಳಿಸಿದ್ದಾರೆ. ಲಾಕ್‌ಡೌನ್ ಅವಧಿಯಲ್ಲಿ ಜಾನುವಾರು ಗಳಿಗೆ ತೊಂದರೆಯಾಗದಂತೆ ವಿಶ್ವವಿದ್ಯಾಲ ಯದಲ್ಲಿ ಮೇವು ಬ್ಯಾಂಕ್ ಮಾಡಲಾಗಿದ್ದು, ಜಾನುವಾರುಗಳಿಗೆ ಮೇವು ನೀಡುವ ಮನಸ್ಸಿದ್ದವರು ವಿಶ್ವವಿದ್ಯಾಲಯದ ಸಂಶೋಧನಾ ಸಂಯೋಜಕ ಲಿಂಗರಾಜ ನಿಡುವಣಿ (80505 01377) ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

---

ಜಾನುವಾರುಗಳಿಗೆ ಮೇವಿನ ವ್ಯವಸ್ಥೆ | ವಿವಿ ಕಾರ್ಯಕ್ಕೆ ಜನರ ಮೆಚ್ಚುಗೆ

# ಹಸಿವು ನೀಗಿಸಿದ ವಿವಿ ಸಿಬ್ಬಂದಿ

**ವಿಕ ವಿಶೇಷ** ಗದಗ

ಕೊರೊನಾ ಸಂಕಷ್ಟ ಕಾಲದಲ್ಲಿ ಅಸಂಖ್ಯಾತ ಮಾನವೀಯ ಮುಖಗಳು ಅನಾವರಣ ಕಂಡಿವೆ. ಅದರಲ್ಲೂ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿವಿ ಸಿಬ್ಬಂದಿ, ವಿದ್ಯಾರ್ಥಿಗಳ ಕಾರ್ಯ ವಿಶಿಷ್ಟವಾಗಿದೆ.

## ವಿಶ್ವವಿದ್ಯಾಲಯದಲ್ಲಿ ಮೇವು ಬ್ಯಾಂಕ್

## ಗೋ ರಕ್ಷಣೆ ಕಾರ್ಯಕ್ಕೆ ಸಾರ್ವಜನಿಕರ ಹರ್ಷ

ಜನತಾ ಕರ್ಫ್ಯೂ ಸಮಯದಲ್ಲಿ ಹಸಿವಿನಿಂದ ಬಳಲುತ್ತಿರುವ ಅವಳಿ ನಗರದ ಬೀದಿ ಜಾನುವಾರುಗಳಿಗೆ ವಿವಿ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಮೇವು ನೀಡುವ ಮೂಲಕ, ಜಾನುವಾರುಗಳ ಹಸಿವು ನೀಗಿಸುವ ಕೆಲಸ ಆರಂಭಿಸಿದ್ದಾರೆ.

ಎರಡು ದಿನಗಳಿಂದ ಅವಳಿ ನಗರದ ವಿವಿಧ ವಾರ್ಡ್‌ಗಳಿಗೆ ತೆರಳಿ ಹಸಿ ಮೇವು ಪೂರೈಸುವ ಮೂಲಕ ಗೋ ಸಂರಕ್ಷಣೆ ಕಾರ್ಯದಲ್ಲಿ ನಿರತರಾಗಿದ್ದಾರೆ. ವಿವಿ ಸಿಬ್ಬಂದಿ ಕಾರ್ಯಕ್ಕೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ.



ಗದಗನಲ್ಲಿ ಬಿಡಾಡಿ ಜಾನುವಾರುಗಳಿಗೆ ಕೆಎಸ್‌ಆರ್‌ಡಿಪಿಆರ್ ವಿವಿ ಸಿಬ್ಬಂದಿ ಮೇವು ಹಾಕುತ್ತಿರುವುದು.



**ಮೇವು ಬ್ಯಾಂಕ್ :** ಅವಳಿ ನಗರದಲ್ಲಿ ಬಿಡಾಡಿ ದನಗಳ ಹೆಚ್ಚಿನ ಸಂಖ್ಯೆಯಲ್ಲಿವೆ. ತರಕಾರಿ ಮಾರುಕಟ್ಟೆ ಸ್ಥಳಾಂತರ ಮಾಡಿದ್ದರಿಂದ ಆ ಎಲ್ಲ ಬಿಡಾಡಿ ದನಗಳಿಗೆ ಆಹಾರ ಇಲ್ಲದೇ ಸಂಕಷ್ಟ ಎದುರಿಸುವಂತಾಗಿದ್ದವು. ಹೀಗಾಗಿ ಕೆಲ ಜಾನುವಾರುಗಳಿಗೆ ನೆರವಾಗುವ ಉದ್ದೇಶದಿಂದ ಮೇವು ವಿತರಣೆ ಆರಂಭಿಸಲಾಗಿದೆ. ಮೇವು ವಿತರಣೆಗೆ ಹೋದಾಗ ಕೆಲ ಜಾನುವಾರುಗಳು ಪ್ಲಾಸ್ಟಿಕ್ ತಿನ್ನುವುದನ್ನು ನೋಡಿ ಮನಸ್ಸಿಗೆ ನೋವಾಯಿತು. ಹೀಗಾಗಿ ಮೇವು ವಿತರಣೆಯನ್ನು ಕನಿಷ್ಠ 10-12 ದಿನವಾದರೂ ಕೈಗೊಳ್ಳಬೇಕು ಎನ್ನುವ ಕಾರಣಕ್ಕೆ ವಿವಿದಲ್ಲಿ ಮೇವು ಬ್ಯಾಂಕ್ ಆರಂಭಿಸಲಾಗಿದೆ. ವಿವಿ ಆವರಣದಲ್ಲಿ ಬೆಳೆದ ಮೇವು, ದಾನಿಗಳಿಂದ ಸಂಗ್ರಹಿಸಿ ಅಥವಾ ಮೇವು ಖರೀದಿ ಮಾಡಿ ಜಾನುವಾರುಗಳಿಗೆ ನೀಡುವ ಇಚ್ಛೆ ಹೊಂದಿದ್ದಾಗಿ ವಿವಿ ಸಿಬ್ಬಂದಿ ಹೇಳುತ್ತಾರೆ.

### 2-3 ಟನ್ ಮೇವು ಪೂರೈಕೆ

ಕೊರೊನಾ ಸಂಕಷ್ಟದ ಮಧ್ಯೆಯೂ ಎರಡು ದಿನಗಳಿಂದ 2-3 ಟನ್ ಹಸಿ ಮೇವು ವಿತರಣೆ ಮಾಡಲಾಗಿದೆ. ಖುದ್ದಾಗಿ ಜಾನುವಾರುಗಳಿದ್ದಲ್ಲಿಗೆ ತೆರಳಿ ಮೇವು ಹಾಕಲಾಗುತ್ತಿದೆ. ದಾನಿಗಳ ನೆರವು ಪಡೆದು ಈ ಕಾರ್ಯವನ್ನು ಮತ್ತಷ್ಟು ದಿನ ತಪ್ಪದೇ ಮುನ್ನಡೆಸಿಕೊಂಡು ಹೋಗುವ ಇಚ್ಛೆ ಇದೆ ಎನ್ನುತ್ತಾರೆ ವಿವಿ ವಿಶೇಷಾಧಿಕಾರಿ ಉಮೇಶ ಬಾರಕೇರ.

### ಗ್ರಾವಿವಿ ಸ್ಪಂದನೆ

ಕೊರೊನಾ ಸಂಕಷ್ಟ ನಿವಾರಿಸುವ ನಿಟ್ಟಿನಲ್ಲಿ ಕೆಎಸ್‌ಆರ್‌ಡಿಪಿಆರ್ ವಿವಿ ಆಪ್ತ ಸಮಾಲೋಚನೆಗಾಗಿ ಸಹಾಯವಾಣಿ, ಅಗತ್ಯವಿದ್ದವರಿಗೆ ಆಹಾರ ವಿತರಣೆ, ರಕ್ತದಾನ, ಪ್ಲಾಸ್ಮಾ ದಾನ ಜಾಗೃತಿ, ಲಸಿಕೆ ಹಾಕಿಸಿಕೊಳ್ಳುವಂತೆ ತಿಳಿವಳಿಕೆ ನೀಡುವ ಕೆಲಸ ಮಾಡುತ್ತಿದೆ. ಮೇ 5 ರಿಂದ ಯೋಗ ಶಿಬಿರ ಹಮ್ಮಿಕೊಂಡಿದೆ.

ಕೊರೊನಾ ಸಂಕಷ್ಟದ ಸಮಯದಲ್ಲಿ ಜನರ ಜತೆಗೆ ಜಾನುವಾರುಗಳು ಸಂಕಷ್ಟ ಎದುರಿಸುತ್ತಿವೆ. ವಿವಿ ಕುಲಪತಿಗಳು, ಕುಲಸಚಿವರ ಮಾರ್ಗದರ್ಶನದಲ್ಲಿ ಮೇವು ವಿತರಣೆ ಮಾಡಲಾಗುತ್ತಿದೆ.

**- ಲಿಂಗರಾಜ ನಿಡುವಣಿ,**
ಸಂಶೋಧನಾ ಸಂಯೋಜಕ